ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂ: ವಾತೆಅಆ(ಗು&ಸ)/ಉಆ/ಸಿಆರ್-201/11-12

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ,
'ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1',
ಕಾಳಿದಾಸ ಮಾರ್ಗ, ಗಾಂಧಿನಗರ,
ಬೆಂಗಳೂರು – 560 009.
ದಿನಾಂಕ: 16-12-2011.

## : ಅಧಿಸೂಚನೆ :

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಪೂರ್ವ ವಲಯ, ಗುಲ್ಬರ್ಗಾ ಈ ವಿಭಾಗದ ಗುಲ್ಬರ್ಗಾ ನಗರದ ಆಳಂದ ರಸ್ತೆಯಲ್ಲಿರುವ ಮಾರಾಟ ತೆರಿಗೆ ತನಿಖಾ ಠಾಣೆಯು ಗುಲ್ಬರ್ಗಾ ನಗರದ ಸರಹದ್ದಿನಲ್ಲಿ ಕಾರ್ಯನಿರ್ವಹಿಸುತ್ತಿರುವುದಿಲ್ಲ .

ಅಲ್ಲದೆ ಈ ತನಿಖಾ ಠಾಣೆಯ ಸುತ್ತ ಅನೇಕ ಬಳಸು ರಸ್ತೆಗಳಿದ್ದು, ಸರಕುವಾಹನಗಳು ಆ ಬಳಸು ರಸ್ತೆಗಳ ಮೂಲಕ ಹಾದು ಹೋಗುವುದರಿಂದ ಈ ತನಿಖಾ ಠಾಣೆಯಲ್ಲಿ ಹೆಚ್ಚು ದಾಖಲೆಗಳು ಸಂಗ್ರಹವಾಗುತ್ತಿಲ್ಲ. ಆದುದರಿಂದ ಈ ಸ್ಥಾನಿಕ ತನಿಖಾ ಠಾಣೆಯನ್ನು ಮುಂದುವರೆಸುವ ಅವಶ್ಯಕತೆ ಇರುವುದಿಲ್ಲ.

ಹಾಗೂ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ), ಪೂರ್ವ ವಲಯ, ಗುಲ್ಬರ್ಗಾರವರಿಗೆ ಜಿಲ್ಲಾಧಿಕಾರಿ, ಗುಲ್ಬರ್ಗಾರವರು ಸೂಚನೆಗಳನ್ನು ನೀಡಿ, ರಸ್ತೆ ಅಗಲೀಕರಣವಾಗಬೇಕಿರುವುದರಿಂದ ಈ ತನಿಖಾ ಠಾಣೆಯನ್ನು ತೆರವುಗೊಳಿಸಬೇಕೆಂದು ಸಹ ತಿಳಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಗುಲ್ಬರ್ಗಾ ನಗರದ ಆಳಂದ ರಸ್ತೆಯಲ್ಲಿರುವ ಮಾರಾಟ ತೆರಿಗೆ ತನಿಖಾ ಠಾಣೆಯನ್ನು ರದ್ದುಗೊಳಿಸುವುದು ಸೂಕ್ತವಾಗಿರುತ್ತದೆ.

ಆದುದರಿಂದ, ಪ್ರದೀಪ್‌ಸಿಂಗ್ ಖರೋಲ, ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ಆದ ನಾನು 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯಿದೆ (2004ರ ಕರ್ನಾಟಕ ಕಾಯಿದೆಯ ಸಂಖ್ಯೆ 32)ಯ ಕಲಮು 53(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಗುಲ್ಬರ್ಗಾದ ಆಳಂದ ರಸ್ತೆ,ಯಲ್ಲಿರುವ ಮಾರಾಟ ತೆರಿಗೆ ತನಿಖಾ ಠಾಣೆಯನ್ನು ರದ್ದುಗೊಳಿಸಿ ಆದೇಶಿಸುತ್ತಿದ್ದೇನೆ.

ಈ ಅಧಿಸೂಚನೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

ಪ್ರದೀಪ್ ಸಿಂಗ್ ಖರೋಲ
ವಾಣಿಜ್ಯ ತೆರಿಗೆ ಆಯುಕ್ತರು
(ಕರ್ನಾಟಕ), ಬೆಂಗಳೂರು.

**ಪ್ರತಿಯನ್ನು:**

1) ಇಲಾಖೆಯ ಎಲ್ಲಾ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರುಗಳಿಗೆ,
2) ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರುಗಳಿಗೆ,
3) ವಾಣಿಜ್ಯ ತೆರಿಗೆ ಅಧಿಕಾರಿ, ಮಾರಾಟ ತೆರಿಗೆ ತನಿಖಾ ಠಾಣೆ, ಆಳಂದ ರಸ್ತೆ, ಗುಲ್ಬರ್ಗಾ ರವರಿಗೆ,
4) 'ಇ-ಆಡಳಿತ' ವಿಭಾಗಕ್ಕೆ ಇಲಾಖೆಯ ಜಾಲತಾಣ http://ctax.kar.nic.in ನಲ್ಲಿ ಮತ್ತು ವಿಸ್ತೃತ ಜಾಲತಾಣದಲ್ಲಿ (WAN) ಪ್ರಕಟಿಸಲು ಸೂಚಿಸಿದೆ.
5) ಸಾರ್ವಜನಿಕ ಸಂಪರ್ಕಾಧಿಕಾರಿ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಕಳುಹಿಸುತ್ತಾ ಈ ಅಧಿಸೂಚನೆಯನ್ನು ಸಂಚಾಲಕರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಕಳುಹಿಸಿ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ ಈ ಅಧಿಸೂಚನೆಯ ನೂರು ಪ್ರತಿಗಳನ್ನು ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ), ಬೆಂಗಳೂರು ರವರಿಗೆ ಕಳುಹಿಸಲು ಕೋರಲು ಸೂಚಿಸಲಾಗಿದೆ.
6) ರಕ್ಷಾ ಕಡತಕ್ಕೆ (ಆಯುಕ್ತರ ಆಪ್ತ ಶಾಖೆ). 7) ಕಛೇರಿ ಪ್ರತಿ.